INWARD NO:- 41/115 20
Date: 04-10-19

ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಇಲಾಖೆ

ಸಂ: ಕಾಶಿಇ/74/ಖಾಹುಖ/ಶಿವಿ/2018-19/ನೇವಿ-2

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ: 30.08.2019.

ಗೆ,
ಜಂಟಿ ನಿರ್ದೇಶಕರು,
ಪ್ರಾದೇಶಿಕ ಕಛೇರಿ,
ಕಾಲೇಜು ಶಿಕ್ಷಣ ಇಲಾಖೆ,
ಶಿವಮೊಗ್ಗ.

ಮಾನ್ಯರೆ,

ವಿಷಯ: ಶ್ರೀಮತಿ ಗಿರಿಯಮ್ಮ ಆರ್.ಕಾಂತಪ್ಪ ಶ್ರೇಷ್ಠಿ ಪ್ರಥಮ ದರ್ಜೆ ಮಹಿಳಾ ಮಹಾವಿದ್ಯಾಲಯ, ಹರಿಹರ, ಇಲ್ಲಿ ಖಾಲಿಯಿರುವ ಬೋಧಕರ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಪತ್ರ ಸಂಖ್ಯೆ: ಇಡಿ/240/ಯುಪಿಸಿ/2014, ದಿನಾಂಕ:01.09.2017.
2. ಸರ್ಕಾರದ ಆದೇಶ ಸಂಖ್ಯೆ: ಇಡಿ/483/ಯುಎನ್ಇ/2017,ದಿ:16.03.2019.
3. ತಮ್ಮ ಪತ್ರ ಸಂಖ್ಯೆ: ಪ್ರಾಕಾಶಿ/ಕಾಶಿಇ/367/ಎಸ್‌ಜಿಆರ್‌ಕೆ/ಖಾಹುಭ/2017-18, ದಿ:26.03.2018 & 22.11.2018.
4. ಈ ಕಛೇರಿಯ ಸಮಸಂಖ್ಯೆ ಪತ್ರ ದಿನಾಂಕ: 28.07.2018 & 28.02.2019.
5. ಸರ್ಕಾರದ ಪತ್ರ ಸಂಖ್ಯೆ:ಇಡಿ/178/ಯುಪಿಸಿ/2018 ದಿನಾಂಕ:22.07.2019.

******

ಸೂಚಿತ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1)ರ ಸರ್ಕಾರದ ಪತ್ರದಲ್ಲಿ ಇಲಾಖಾ ವ್ಯಾಪ್ತಿಗೊಳಪಡುವ ಖಾಸಗಿ ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳಲ್ಲಿ ದಿನಾಂಕ:31.12.2015ರೊಳಗೆ ವಿವಿಧ ಕಾರಣಗಳಿಂದ ತೆರವಾಗಿರುವ ಬೋಧಕರ ಹುದ್ದೆಗಳನ್ನು ಕೆಲವೊಂದು ಷರತ್ತಿಗೊಳಪಟ್ಟು ಭರ್ತಿ ಮಾಡಲು ಅನುಮತಿ ನೀಡಲಾಗಿದೆ.

ಉಲ್ಲೇಖ (3)ರ ತಮ್ಮ ಪತ್ರಗಳಲ್ಲಿ ಪೌರ ಸೇವಾ ಸಮಿತಿ (ರಿ), ಹರಿಹರ ಇದರ ವ್ಯಾಪ್ತಿಯಲ್ಲಿ ಶ್ರೀಮತಿ ಗಿರಿಯಮ್ಮ ಆರ್.ಕಾಂತಪ್ಪ ಶ್ರೇಷ್ಠಿ ಪ್ರಥಮ ದರ್ಜೆ ಮಹಿಳಾ ಮಹಾವಿದ್ಯಾಲಯ, ಹರಿಹರ, ಇಲ್ಲಿ ಖಾಲಿಯಿರುವ ಬೋಧಕರ ಹುದ್ದೆಗಳನ್ನು ಭರ್ತಿ ಮಾಡುವ ಸಂಬಂಧದಲ್ಲಿ ತಾವು ಈ ಕಛೇರಿಗೆ ಪ್ರಸ್ತಾವನೆ ಸಲ್ಲಿಸಿ ನೀಡಿರುವ ಮಾಹಿತಿಯನ್ವಯ, 2017-18 & 2018-19ನೇ ಶೈಕ್ಷಣಿಕ ಸಾಲಿನ ಕಾರ್ಯಭಾರಕ್ಕನುಗುಣವಾಗಿ ಖಾಲಿ ಇರುವ ಬೋಧಕರ ಹುದ್ದೆಗಳನ್ನು ಭರ್ತಿ ಮಾಡಲು ಆಡಳಿತ ಮಂಡಳಿಗೆ ಅನುಮತಿ ನೀಡುವ ಬಗ್ಗೆ ಉಲ್ಲೇಖ(4)ರ ಈ ಕಛೇರಿಯ ಪತ್ರಗಳಲ್ಲಿ ಸರ್ಕಾರದ ಅನುಮೋದನೆ ಕೋರಲಾಗಿತ್ತು.

ಇದಕ್ಕೆ ಸಂಬಂಧಿಸಿದಂತೆ ಉಲ್ಲೇಖ (5)ರ ಸರ್ಕಾರದ ಪತ್ರದಲ್ಲಿ ಶ್ರೀಮತಿ ಗಿರಿಯಮ್ಮ ಆರ್.ಕಾಂತಪ್ಪ ಶ್ರೇಷ್ಠಿ ಪ್ರಥಮ ದರ್ಜೆ ಮಹಿಳಾ ಮಹಾವಿದ್ಯಾಲಯ, ಹರಿಹರ ಇಲ್ಲಿ ಖಾಲಿ ಇರುವ ಈ ಕೆಳಕಂಡ ಒಟ್ಟು 05 ಬೋಧಕರ ಹುದ್ದೆಗಳನ್ನು ಕೆಲವೊಂದು ಷರತ್ತಿಗೊಳಪಟ್ಟು ಭರ್ತಿ ಮಾಡಲು ಅನುಮತಿ ನೀಡಲಾಗಿದೆ.

| ಕ್ರ. ಸಂ | ವಿಷಯ | ಭರ್ತಿ ಮಾಡಲು ಅನುಮತಿ ನೀಡಿರುವ ಹುದ್ದೆಗಳ ಸಂಖ್ಯೆ | ಭರ್ತಿ ಮಾಡಬೇಕಾದ ಹುದ್ದೆಗಳಿಗೆ ನಿಗದಿಪಡಿಸಿರುವ ಮೀಸಲಾತಿ ಮೀಸಲಾತಿ | ಷರಾ |
|---|---|---|---|---|
| 1 | 2 | 3 | 4 | 5 |
| 1 | ಇತಿಹಾಸ | 01 | ಏಕವ್ಯಕ್ತಿ ವಿಭಾಗ ಮೀಸಲಾತಿ ಅನ್ವಯವಾಗುವುದಿಲ್ಲ | ಶ್ರೀಮತಿ.ಜಿ.ಎಂ.ನಿರ್ಮಲ ಇವರ ನಿವೃತ್ತಿಯಿಂದ ತೆರವಾದ ಹುದ್ದೆಗೆದುರಾಗಿ (ದಿನಾಂಕ:31.01.2011) |
| 2 | ಸಮಾಜಶಾಸ್ತ್ರ | 01 | | ಶ್ರೀ ಎಸ್.ಮುರಿಗಪ್ಪ ಇವರ ನಿವೃತ್ತಿಯಿಂದ ತೆರವಾದ ಹುದ್ದೆಗೆದುರಾಗಿ (ದಿನಾಂಕ:31.10.2011) |
| 3 | ರಾಜ್ಯಶಾಸ್ತ್ರ | 01 | | ಶ್ರೀ.ಸಿ.ಜಿ.ಪರಮೇಶ್ವರಪ್ಪ ಇವರ ನಿವೃತ್ತಿಯಿಂದ ತೆರವಾದ ಹುದ್ದೆಗೆದುರಾಗಿ (ದಿನಾಂಕ:31.12.2014) |
| 4 | ದೈಹಿಕ ಶಿಕ್ಷಣ ನಿರ್ದೇಶಕರು | 01 | | ಶ್ರೀ.ಎಂ.ವೀರಭದ್ರಸ್ವಾಮಿ ಇವರ ನಿಧನದಿಂದ ತೆರವಾದ ಹುದ್ದೆಗೆದುರಾಗಿ (ದಿನಾಂಕ:23.06.2012) |
| 5 | ಗ್ರಂಥಪಾಲಕರು | 01 | | ಶ್ರೀ.ಚಂದ್ರಪ್ಪ ಗರ್ಭಗುಡಿ ಇವರ ನಿಧನದಿಂದ ತೆರವಾದ ಹುದ್ದೆಗೆದುರಾಗಿ (ದಿನಾಂಕ:16.08.2010) |
| | ಒಟ್ಟು | 05 | | |

PRINCIPAL,
Smt. Giriyamma R. Kanthappa Shres.
First Grade Women's College
Harihar - 577 601

Scanned with CamScanner

ಮೇಲಿನಂತೆ ಹಾಗೂ ಕರ್ನಾಟಕ ಶಿಕ್ಷಣ ಸಂಸ್ಥೆ (ಕಾಲೇಜು ಶಿಕ್ಷಣ) ನಿಯಮಗಳು 2003ರಂತೆ ಕೂಲಂಕಷವಾಗಿ ಪರಿಶೀಲಿಸಿ, ಕಾಲೇಜು ಶಿಕ್ಷಣ ಇಲಾಖೆಯ ವ್ಯಾಪ್ತಿಯ ಅನುದಾನಿತ ಪದವಿ ಕಾಲೇಜುಗಳಲ್ಲಿ ದಿನಾಂಕ:31/12/2015 ರೊಳಗೆ ನಿವೃತ್ತಿ, ಮರಣ, ರಾಜೀನಾಮೆ, ಹಾಗೂ ಇತರೆ ಕಾರಣಗಳಿಂದ ಖಾಲಿ ಆಗಿರುವ ಬೋಧಕ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಂಡು, ಕಾಲೇಜುವಾರು ಪ್ರತ್ಯೇಕ ಪ್ರಸ್ತಾವನೆಯನ್ನು ನಿಗಧಿತ ಚೆಕ್-ಲಿಸ್ಟ್‌ನೊಂದಿಗೆ ಎಲ್ಲಾ ಅಂಕಪಟ್ಟಿಗಳನ್ನು ಹಾಗೂ ಪ್ರಮಾಣ ಪತ್ರಗಳನ್ನು ಸಂಬಂಧಪಟ್ಟ ಪ್ರಾಧಿಕಾರಗಳಿಂದ/ವಿಶ್ವವಿದ್ಯಾಲಯಗಳಿಂದ ನೈಜತೆಯ ಬಗ್ಗೆ ಪರಿಶೀಲಿಸಿ ದೃಢೀಕರಿಸಿಕೊಂಡು ಸಂಬಂಧಪಟ್ಟ ಪ್ರಾದೇಶಿಕ ಜಂಟಿ ನಿರ್ದೇಶಕರ ಮೇಲು ರುಜುವಿನೊಂದಿಗೆ ಇಲಾಖೆಯ ಸ್ಪಷ್ಟ ಅಭಿಪ್ರಾಯ ಹಾಗೂ ಶಿಫಾರಸ್ಸಿನೊಂದಿಗೆ ಸರ್ಕಾರದ ಅನುಮೋದನೆಗಾಗಿ ಜರೂರಾಗಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಿಕೊಡುವಂತೆ ಈ ಮೂಲಕ ತಮಗೆ ತಿಳಿಸಲು ನಿರ್ದೇಶಿತನಾಗಿದ್ದೇನೆ.

ಈ ಪತ್ರವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ 290 ವೆಚ್ಚ-8/2017 ದಿನಾಂಕ 28.07.2017 ರ ಸಹಮತಿಯ ಮೇರೆಗೆ ಹೊರಡಿಸಲಾಗಿದೆ

ತಮ್ಮ ನಂಬುಗೆಯ,

(ಕೆ.ಶಿವಲಿಂಗಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ಕಾಲೇಜು ಶಿಕ್ಷಣ).

Secretary
Poura Seva Samithi (R)
HARIHAR-577601.

PRINCIPAL,
Smt. Giriyamma R. Kanthappa Shresti
First Grade Women's College
Harihar-577 601.

Scanned with CamScanner

INWARD ...
Date: 04-10-19

ಕರ್ನಾಟಕ ಸರ್ಕಾರ,
ಕಾಲೇಜು ಶಿಕ್ಷಣ ಇಲಾಖೆ

ಸಂ:ಪ್ರಾಕಶಿ:ಕಾಶಿಇ:367:ಎಸ್‌ಜಿಆರ್‌ಕೆ:ಖಾಹುಭ:2017-18

ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿ,
ಶಿವಮೊಗ್ಗ. ದಿನಾಂಕ:24.09.2019
ದೂ:08182-240056, Fax:240093

ಗೆ,

ಅಧ್ಯಕ್ಷರು/ಕಾರ್ಯದರ್ಶಿಗಳು
ಪೌರ ಸೇವಾ ಸಮಿತಿ (ರಿ),
ಶ್ರೀಮತಿ ಗಿರಿಯಮ್ಮ ಕಾಂತಪ್ಪ ಶ್ರೇಷ್ಠಿ ಮಹಿಳಾ ಕಾಲೇಜು ಕಟ್ಟಡ,
4ನೇ ಮುಖ್ಯ ರಸ್ತೆ, ಜೆ.ಸಿ.ಬಡಾವಣೆ
ಹರಿಹರ – 577 601

ಮಾನ್ಯರೇ,

ವಿಷಯ: ಪೌರ ಸೇವಾ ಸಮಿತಿ (ರಿ), ಹರಿಹರ ಆಡಳಿತ ಮಂಡಳಿ ವ್ಯಾಪ್ತಿಯಲ್ಲಿ ಬರುವ ಖಾಸಗಿ ಅನುದಾನಿತ ಪದವಿ ಕಾಲೇಜಿನಲ್ಲಿ ಖಾಲಿಯಿರುವ ಬೋಧಕ ವೃಂದದ ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿ ನೀಡುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಪತ್ರ ಸಂಖ್ಯೆ:ಇಡಿ:336:ಯುಪಿಸಿ:2015 ದಿನಾಂಕ:28.07.2017
2. ಸರ್ಕಾರದ ಪತ್ರ ಸಂಖ್ಯೆ:ಇಡಿ:240:ಯುಪಿಸಿ:2014 ದಿನಾಂಕ:01.09.2017
3. ಕಾಲೇಜು ಶಿಕ್ಷಣ ಆಯುಕ್ತರ ಸುತ್ತೋಲೆ ಸಂಖ್ಯೆ:ಕಾಶಿಇ:80:ಖಾಹುಮಾ:2014-15:ನೇ.ವಿ-2 ದಿನಾಂಕ:12.09.2017
4. ಮಾನ್ಯ ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಇವರ ಅರೆಸರ್ಕಾರಿ ಪತ್ರ ಸಂಖ್ಯೆ:ಕಾಶಿಇ:80:ಖಾಹುಮಾ:2014-15:ನೇ.ವಿ-2(ಭಾಗ-2) ದಿನಾಂಕ:23.09.2017
5. ಸರ್ಕಾರದ ಪತ್ರ ಸಂಖ್ಯೆ:ಇಡಿ:37:ಯುಎನ್‌ಇ:2009 ದಿನಾಂಕ:24.12.2009
6. ಈ ಕಛೇರಿ ಪ್ರಸ್ತಾವನೆ ಸಂಖ್ಯೆ:ಪ್ರಾಕಶಿ:ಕಾಶಿಇ:367:ಎಸ್‌ಜಿಆರ್‌ಕೆ:ಖಾಹುಭ:2017-18 ದಿನಾಂಕ:26.03.2018 ಮತ್ತು ದಿನಾಂಕ:22.11.2018
7. ಮಾನ್ಯ ಕಾಲೇಜು ಶಿಕ್ಷಣ ಆಯುಕ್ತರ ಪತ್ರ ಸಂಖ್ಯೆ:ಕಾಶಿಇ:74:ಖಾಹುಭ:ಶಿವಿ:2018-19:ನೇವಿ-2 ದಿನಾಂಕ:30.08.2019.

** ** **

ಸೂಚಿತ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರಿಂದ (4) ರವರೆಗಿನ ಪತ್ರಗಳಿಗೆ ಅನುಗುಣವಾಗಿ, ಇಲಾಖಾ ವ್ಯಾಪ್ತಿಯ ಖಾಸಗಿ ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳಲ್ಲಿ ದಿನಾಂಕ:31.12.2015 ರೊಳಗೆ ವಿವಿಧ ಕಾರಣಗಳಿಂದ ತೆರವಾಗಿರುವ ಬೋಧಕರ ಹುದ್ದೆಗಳನ್ನು ಕೆಲವೊಂದು ಷರತ್ತಿಗೊಳಪಟ್ಟು ಭರ್ತಿ ಮಾಡಲು ದೊರೆತ ಸರ್ಕಾರದ ಅನುಮತಿಯ ಮೇರೆಗೆ, ಪೌರ ಸೇವಾ ಸಮಿತಿ (ರಿ), ಹರಿಹರ ಆಡಳಿತ ಮಂಡಳಿ ವ್ಯಾಪ್ತಿಯಲ್ಲಿ ಬರುವ ಖಾಸಗಿ ಅನುದಾನಿತ ಪದವಿ ಕಾಲೇಜಾದ ಶ್ರೀಮತಿ ಗಿರಿಯಮ್ಮ ಕಾಂತಮ್ಮ ಶ್ರೇಷ್ಠಿ ಮಹಿಳಾ ಕಾಲೇಜು, ಹರಿಹರ ಇಲ್ಲಿ ವಿವಿಧ ಕಾರಣಗಳಿಂದ ತೆರವಾಗಿರುವ ಬೋಧಕರ ಹುದ್ದೆಗಳನ್ನು 2017-18 ಮತ್ತು 2018-19 ನೇ ಶೈಕ್ಷಣಿಕ ಸಾಲಿನ ವಿದ್ಯಾರ್ಥಿಗಳ ಸಂಖ್ಯೆ ಮತ್ತು ಬೋಧನಾ ಕಾರ್ಯಭಾರಕ್ಕೆ ಅನುಗುಣವಾಗಿ, ಖಾಲಿ ಇರುವ ಬೋಧಕರ ಹುದ್ದೆಗಳನ್ನು ಭರ್ತಿ ಮಾಡಲು ಆಡಳಿತ ಮಂಡಳಿಗೆ ಅನುಮತಿಸಲು ಸರ್ಕಾರದಿಂದ

PRINCIPAL,
Smt. Giriyamma R. Kanthappa Shresti
First Grade Women's College
Harihar - 577 601

Scanned with CamScanner

ದೊರೆತ ಅನುಮೋದನೆಗೆ ಪೂರಕವಾಗಿ, ಉಲ್ಲೇಖ (7) ರ ಪತ್ರದಲ್ಲಿ ನೀವು ಕೇಳಕಾಣಿಸಿರುವ ಒಟ್ಟು 05 ಬೋಧಕ ಹುದ್ದೆಗಳನ್ನು ಕೆಲವೊಂದು ನಿಬಂಧನೆಗಳಿಗೊಳಪಟ್ಟು ನಿಯಮಾನುಸಾರ ಭರ್ತಿ ಮಾಡಲು ಅನುಮತಿ ನೀಡಲಾಗಿದೆ.

| ಕ್ರಸಂ | ವಿಷಯ | ಭರ್ತಿ ಮಾಡಲು ಅನುಮತಿ ನೀಡಿರುವ ಹುದ್ದೆಗಳು | ಭರ್ತಿ ಮಾಡಬೇಕಾದ ಹುದ್ದೆಗಳ ಮೀಸಲಾತಿ ವಿವರ | ತೆರವಾಗಿರುವ ಹುದ್ದೆಗಳ ಯಾರಿಂದ ಮತ್ತು ಯಾವ ದಿನಾಂಕದಂದು ತೆರವುಗೊಂಡಿರುತ್ತದೆ ಎಂಬ ವಿವರ |
|---|---|---|---|---|
| 1. | ಇತಿಹಾಸ | 01 | ಏಕವ್ಯಕ್ತಿ ವಿಭಾಗ, ಮೀಸಲಾತಿ ಅನ್ವಯವಾಗುವುದಿಲ್ಲ | ಶ್ರೀಮತಿ ಜಿ.ಎಂ.ನಿರ್ಮಲ ಇವರ ನಿವೃತ್ತಿಯಿಂದ ತೆರವಾದ ಹುದ್ದೆಗೆದುರಾಗಿ (ದಿನಾಂಕ:31.01.2011) |
| 2. | ಸಮಾಜಶಾಸ್ತ್ರ | 01 | | ಶ್ರೀ ಎಸ್ ಮುರಿಗೆಪ್ಪ ಇವರ ನಿವೃತ್ತಿಯಿಂದ ತೆರವಾದ ಹುದ್ದೆಗೆದುರಾಗಿ (ದಿನಾಂಕ:31.10.2011) |
| 3. | ರಾಜ್ಯಶಾಸ್ತ್ರ | 01 | | ಶ್ರೀ ಸಿ.ಜಿ.ಪರಮೇಶ್ವರಪ್ಪ ಇವರ ನಿವೃತ್ತಿಯಿಂದ ತೆರವಾದ ಹುದ್ದೆಗೆದುರಾಗಿ (ದಿನಾಂಕ:31.12.2014) |
| 4. | ದೈಹಿಕ ಶಿಕ್ಷಣ ಬೋಧಕರು | 01 | | ಶ್ರೀ ಎಂ.ವೀರಭದ್ರಸ್ವಾಮಿ ಇವರ ನಿಧನದಿಂದ ತೆರವಾದ ಹುದ್ದೆಗೆದುರಾಗಿ (ದಿನಾಂಕ:23.03.2012) |
| 5. | ಗ್ರಂಥಪಾಲಕರು | 01 | | ಶ್ರೀ ಚಂದ್ರಪ್ಪ ಗರ್ಭಗುಡಿ ಇವರ ನಿಧನದಿಂದ ತೆರವಾದ ಹುದ್ದೆಗೆದುರಾಗಿ (ದಿನಾಂಕ:16.08.2010) |
| | ಒಟ್ಟು | 49 ಹುದ್ದೆಗಳು | | |

ಸದರಿ ಹುದ್ದೆಗಳನ್ನು ಭರ್ತಿ ಮಾಡಲು ಆಡಳಿತ ಮಂಡಳಿಯು ರಾಜ್ಯ ಮಟ್ಟದ ಅತಿ ಹೆಚ್ಚು ಪ್ರಸಾರದ ಎರಡು ಪ್ರಮುಖ ದಿನಪತ್ರಿಕೆಗಳಲ್ಲಿ ಜಾಹಿರಾತು ಪ್ರಕಟಿಸಿ ಅರ್ಹ ಅಭ್ಯರ್ಥಿಗಳನ್ನು ಸರ್ಕಾರದ ಮತ್ತು ಯು.ಜಿ.ಸಿ ನಿಯಮಗಳನ್ವಯ ಆಯ್ಕೆ ಸಮಿತಿಯ ಮೂಲಕ ಆಯ್ಕೆ ಮಾಡಿಕೊಂಡು, ಆಯ್ಕೆ ಸಮಿತಿಯ ಮೂಲಕ ಆಯ್ಕೆಯಾದ ಅಭ್ಯರ್ಥಿಗಳ ನೇಮಕಾತಿ ಅನುಮೋದನೆಗಾಗಿ ಸಂಬಂಧಪಟ್ಟ ದೃಢೀಕೃತ ದಾಖಲೆಗಳೊಂದಿಗೆ ಪ್ರಸ್ತಾವನೆಯನ್ನು (ತ್ರಿಪ್ರತಿಗಳಲ್ಲಿ) ಸಲ್ಲಿಸುವಂತೆ ಸೂಚಿಸಲಾಗಿದೆ.

ನಿಬಂಧನೆಗಳು:-

1. ಅಭ್ಯರ್ಥಿಗಳು ಸಂಬಂಧಪಟ್ಟ ವಿಷಯದಲ್ಲಿ ಸ್ನಾತಕೋತ್ತರ ಪದವಿಯಲ್ಲಿ ಕನಿಷ್ಠ 55% ಅಂಕಗಳನ್ನು ಪಡೆದಿರಬೇಕು (ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ 50% ಅಂಕಗಳು) ಮತ್ತು ಎನ್.ಇ.ಟಿ/ಎಸ್.ಎಲ್.ಇ.ಟಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ಪಿಹೆಚ್.ಡಿ ಪದವಿಯನ್ನು ಪಡೆದಿರುವ ಅಭ್ಯರ್ಥಿಗಳಿಗೆ ಎನ್.ಇ.ಟಿ/ಎಸ್.ಎಲ್.ಇ.ಟಿ ಪರೀಕ್ಷೆಯಿಂದ ವಿನಾಯಿತಿ ಇರುತ್ತದೆ. ಪಿಹೆಚ್.ಡಿ ಪದವಿಯನ್ನು ಕೋರ್ಸ್‌ವರ್ಕನೊಂದಿಗೆ ಪಡೆಯಬೇಕಾಗಿರುತ್ತದೆ. ಒಂದು ವೇಳೆ ದಿನಾಂಕ:11.07.2009 ರ ಪೂರ್ವದಲ್ಲಿ ಪಿಹೆಚ್.ಡಿ ಪದವಿ ಪಡೆದಿದ್ದಲ್ಲಿ/ಪಿಹೆಚ್.ಡಿ ಪದವಿಗೆ ನೋಂದಣಿ ಮಾಡಿಸಿದ್ದಲ್ಲಿ ಅಂತಹ ಅಭ್ಯರ್ಥಿಗಳು ದಿನಾಂಕ:04.05.2016 ರ ಯುಜಿಸಿ ಅಧಿಸೂಚನೆಯಲ್ಲಿ ಹೊರಡಿಸಿರುವ ನಿಯಮಗಳನು ಪೂರೈಸುವ ಷರತ್ತುಗಳಿಗೊಳಪಟ್ಟಿರುತ್ತದೆ. ದಿನಾಂಕ:11.07.2009 ರ ನಂತರದ ಯಾವುದೇ ನೇಮಕಾತಿಗೆ ಎಂ.ಫಿಲ್ ವಿದ್ಯಾರ್ಹತೆಯನ್ನು ಪರಿಗಣಿಸತಕ್ಕದ್ದಲ್ಲ.
2. ಪ್ರತಿಯೊಂದು ಹುದ್ದೆಯನ್ನು ಜಾಹೀರಾತುಗೊಳಿಸುವ ಮುನ್ನ ಹುದ್ದೆಗೆ ನಿಗದಿತ ಕನಿಷ್ಠ ಕಾರ್ಯಭಾರ ಅಂದರೆ ಪ್ರಯೋಗಾಲಯ ತರಗತಿಗಳನ್ನು ಹೊಂದಿರುವ ವಿಷಯಗಳಲ್ಲಿ 20 ಗಂಟೆ ಮತ್ತು ಪ್ರಯೋಗಾಲಯ ತರಗತಿಗಳನ್ನು ಹೊಂದಿಲ್ಲದ ವಿಷಯಗಳಲ್ಲಿ 16 ಗಂಟೆ ಕಾರ್ಯಭಾರ ಕಡ್ಡಾಯವಾಗಿರಬೇಕು. ನಿಗದಿತ ಕಾರ್ಯಭಾರ ಇಲ್ಲದಿರುವ ಹುದ್ದೆಗಳನ್ನು ಭರ್ತಿ ಮಾಡತಕ್ಕದ್ದಲ್ಲ.
3. ಸದರಿ ಹುದ್ದೆಗಳು ಅನುಮೋದಿತ ಹಾಗೂ ಮಂಜೂರಾದ (ನಿವೃತ್ತಿ, ಮರಣ, ರಾಜೀನಾಮೆ ಮತ್ತು ಸ್ವಯಂ ನಿವೃತ್ತಿಯಿಂದ ತೆರವಾಗಿರುವ) ಹುದ್ದೆಗಳಾಗಿರಬೇಕು.
4. ಮೇಲ್ಕಂಡ ಹುದ್ದೆಗಳಲ್ಲಿ ಯಾರಾದರೂ ಅರೆಕಾಲಿಕ, ಸ್ಟಾಪ್-ಗ್ಯಾಪ್ ಉಪನ್ಯಾಸಕರು ಕರ್ತವ್ಯ ನಿರ್ವಹಿಸುತ್ತಿದ್ದು, ಅವರುಗಳು ನ್ಯಾಯಾಲಯದಲ್ಲಿ ದಾವೆ ಹೂಡಿದ್ದು, ಪ್ರಕರಣ ನ್ಯಾಯಾಲಯದಲ್ಲಿ ಬಾಕಿ ಇದ್ದಲ್ಲಿ, ಅಂತಹ ಹುದ್ದೆಗಳನ್ನು ಭರ್ತಿ ಮಾಡುವಾಗ ನ್ಯಾಯಾಲಯದ ಆದೇಶದ ಪ್ರಕಾರ ಮತ್ತು ನಿಯಮಾನುಸಾರ ಸೂಕ್ತ ಕ್ರಮ ಕೈಗೊಳ್ಳಬೇಕು.
5. ಹುದ್ದೆಗಳನ್ನು ಭರ್ತಿ ಮಾಡುವ ಕುರಿತು ಜಾಹೀರಾತನ್ನು ರಾಜ್ಯಮಟ್ಟದ ಅತಿ ಹೆಚ್ಚು ಪ್ರಸಾರದ ಎರಡು ಪ್ರಮುಖ (ಕನ್ನಡ ಮತ್ತು ಇಂಗ್ಲೀಷ್) ದಿನಪತ್ರಿಕೆಗಳಲ್ಲಿ ಪ್ರಕಟಪಡಿಸುವುದು.

PRINCIPAL,
Smt. Giriyamma R. Kanthappa Shresti
First Grade Women's College
...577 601

Scanned with CamScanner

ನೇಮಕಾತಿ ನಿಯಮದಂತೆ ಅಭ್ಯರ್ಥಿಗಳ ವಯೋಮಿತಿ ...
(ದಿನಾಂಕ:20.06.2018 ರ ಸರ್ಕಾರದ ಆದೇಶ ಸಂಖ್ಯೆ:ಇಡಿ:49:ಯುಪಿಸಿ:2018ರ ಪ್ರಕಾರ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ & ಕ್ಯಾಟಗರಿ-1 ಗರಿಷ್ಠ 45, ಇತರೆ ಹಿಂದುಳಿದ ವರ್ಗ ಗರಿಷ್ಠ 43 ಹಾಗೂ ಸಾಮಾನ್ಯ ವರ್ಗ ಗರಿಷ್ಠ 40 ವರ್ಷಗಳು.)

7. ಸರ್ಕಾರದ ಆದೇಶ ಸಂಖ್ಯೆ:ಇಡಿ:87:ಯುಪಿಸಿ:2016 ದಿನಾಂಕ:13.12.2018ರ ಪ್ರಕಾರ ಖಾಸಗಿ ಅನುದಾನಿತ ಪದವಿ ಕಾಲೇಜುಗಳಲ್ಲಿ ಪೂರ್ಣಕಾಲಿಕ ಬೋಧನಾನುಭವ ಹೊಂದಿರುವ ಅಭ್ಯರ್ಥಿಗಳಿಗೆ ಅವರು ಬೋಧನಾನುಭವ ಹೊಂದಿರುವ ಸೇವಾವಧಿ ಅಥವಾ 5 ವರ್ಷಗಳು ಇವುಗಳಲ್ಲಿ ಯಾವುದು ಕಡಿಮೆಯೋ ಅಷ್ಟು ಅವಧಿಗೆ ಗರಿಷ್ಠ ವಯೋಮಿತಿಯಲ್ಲಿ ವಿನಾಯಿತಿ ಇರುತ್ತದೆ.

8. ಸಾಮಾನ್ಯ ಅಭ್ಯರ್ಥಿ ಹಾಗೂ ಏಕವ್ಯಕ್ತಿ ವಿಭಾಗ ಎಂದು ಗುರುತಿಸಿರುವ ಹುದ್ದೆಗಳಿಗೆ ಎಲ್ಲಾ ವರ್ಗದ ಅಭ್ಯರ್ಥಿಗಳು ಅರ್ಜಿಯನ್ನು ಸಲ್ಲಿಸಬಹುದಾಗಿದ್ದು, ದಿನಾಂಕ:20.06.2018 ರ ಸರ್ಕಾರದ ಆದೇಶ ಸಂಖ್ಯೆ:ಇಡಿ49:ಯುಪಿಸಿ:2018 ರ ಪ್ರಕಾರ ಆಯಾ ವರ್ಗಕ್ಕೆ ನಿಗದಿಪಡಿಸಿರುವಂತೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ & ಕ್ಯಾಟಗರಿ-1 ಗರಿಷ್ಠ 45 ಇತರೆ ಹಿಂದುಳಿದ ವರ್ಗ ಗರಿಷ್ಠ 43 ಹಾಗೂ ಸಾಮಾನ್ಯ ವರ್ಗ ಗರಿಷ್ಠ 40 ವರ್ಷಗಳ ವಯೋಮಿತಿ ಒಳಗೆ ಇರತಕ್ಕದ್ದು ಎಂಬುದಾಗಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸುವುದು.

9. ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳಿಗೆ ಸರ್ಕಾರದ ಆದೇಶ ಸಂಖ್ಯೆ:ಇಡಿ:483:ಯುಎನ್ಇ:2017 ದಿನಾಂಕ:16.03.2019 ರ ಆದೇಶದಲ್ಲಿ ತಿಳಿಸಿರುವಂತೆ, ಆಯ್ಕೆ ಸಮಿತಿಯನ್ನು ರಚನೆ ಮಾಡಿ ಸಂದರ್ಶನ ನಡೆಸಿ, ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡತಕ್ಕದ್ದು.

10. ಹೀಗೆ ಆಯ್ಕೆ ಸಮಿತಿ ಮೂಲಕ ಆಯ್ಕೆ ಮಾಡಲಾದ ಅಭ್ಯರ್ಥಿಗಳ ಆಯ್ಕೆ ಅನುಮೋದನೆಗಾಗಿ, ಆಯ್ಕೆ ಸಮಿತಿ ವರದಿ (ಪ್ರತ್ಯೇಕ ವಿಷಯವಾರು), ಸದರಿ ಅಭ್ಯರ್ಥಿಗಳ ವಯಸ್ಸು, ವಿದ್ಯಾರ್ಹತೆ/ಮೀಸಲಾತಿ ಮತ್ತು ಇನ್ನಿತರೆ ಅಂಶಗಳನ್ನು ಸ್ಪಷ್ಟೀಕರಿಸಿರುವ ದಾಖಲೆಗಳನ್ನು (ಆಡಳಿತ ಮಂಡಳಿ ಮತ್ತು ಪ್ರಾಂಶುಪಾಲರಿಂದ ದೃಢೀಕೃತ) - ತ್ರಿಪ್ರತಿಗಳಲ್ಲಿ ಸಲ್ಲಿಸುವುದು.

11. ಸದರಿ ಆಯ್ಕೆ ಪ್ರಕ್ರಿಯೆಯನ್ನು ನಡೆಸುವಾಗ ಕಾಲಕಾಲಕ್ಕೆ ಹೊರಡಿಸಲಾಗಿರುವ ಸರ್ಕಾರಿ ಮತ್ತು ಯುಜಿಸಿ ನಿಯಮಾವಳಿಗಳನ್ನು/ಮಾರ್ಗಸೂಚಿಗಳನ್ನು ತಪ್ಪದೇ ಪಾಲಿಸುವುದು.

12. ಹುದ್ದೆಗಳಿಗೆ ಯು.ಜಿ.ಸಿ ನಿಗದಿಪಡಿಸಿದ ವಿದ್ಯಾರ್ಹತೆ, ಆಯ್ಕೆ ವಿಧಾನದಂತೆ ನೇಮಕಾತಿ ನಿಯಮಗಳನ್ನು ಅನುಸರಿಸಿ ಪಾರದರ್ಶಕವಾಗಿ ನೇಮಕಾತಿ ಮಾಡಿಕೊಳ್ಳತಕ್ಕದ್ದು ಮತ್ತು ಹುದ್ದೆಗಳ ಭರ್ತಿ ಮಾಡಲು ಸರ್ಕಾರದ ಆದೇಶ ಸಂಖ್ಯೆ:ಇಡಿ:146:ಯುಪಿಸಿ:1979 ದಿನಾಂಕ:03.10.1981 ರ ಅಂಶಗಳನ್ನು ದಾಖಲೆಗಳ ಸಹಿತ ಪರಿಶೀಲಿಸಿ ನಿಯಮಾನುಸಾರ ಕ್ರಮ ವಹಿಸತಕ್ಕದ್ದು. ಕರ್ನಾಟಕ ಶಿಕ್ಷಣ ಸಂಸ್ಥೆ (ಕಾಲೇಜು ಶಿಕ್ಷಣ) ನಿಯಮಗಳು 2003 ರಂತೆ ಕೂಲಂಕುಷವಾಗಿ ಪರಿಶೀಲಿಸಿ ಕ್ರಮವಹಿಸತಕ್ಕದ್ದು.

13. ಕಾಲೇಜಿನ ಆಡಳಿತ ಮಂಡಳಿಯು ನೀಡಿರುವ ಮಾಹಿತಿ ಆಧಾರಿತ ಸದರಿ ಕಾಲೇಜಿನಲ್ಲಿ ಖಾಲಿ ಇರುವ ಬೋಧಕರ ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿ ನೀಡಲಾಗಿದ್ದು, ಈ ಬಗ್ಗೆ ತಪ್ಪು ಮಾಹಿತಿ/ವ್ಯತ್ಯಾಸದ ಮಾಹಿತಿ ನೀಡಿ ಮುಂದೆ ಅಸಂಗತತೆ ಏನಾದರೂ ಉದ್ಭವಿಸಿದಲ್ಲಿ ಇದಕ್ಕೆ ಸಂಬಂಧಪಟ್ಟ ಆಡಳಿತ ಮಂಡಳಿಯವರನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.

ತಮ್ಮ ವಿಶ್ವಾಸಿ

ಜಂಟಿ ನಿರ್ದೇಶಕರು
ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿ
ಶಿವಮೊಗ್ಗ-577203

ಪ್ರತಿ ಮಾಹಿತಿಗಾಗಿ-

1. ಮಾನ್ಯ ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು.
2. ಕಛೇರಿ ಪ್ರತಿ.

PRINCIPAL,
Smt. Giriyamma R. Kanthappa Shresti
First Grade Women's College
Harihar - 577 601

Secretary
Poura Seva Samithi (R)
HARIHAR-577601.

Scanned with CamScanner

ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಇಲಾಖೆ

ನೋಂದಣಿ ಅಂಚೆ,
ಸ್ವೀಕೃತಿಯೊಂದಿಗೆ

ಸಂಖ್ಯೆ:ಪ್ರಾಕಶಿ:ಕಾಶಿಇ:367:ಎಸ್‌ಜಿಆರ್‌ಕೆ:ಖಾಹುಭ:2017-18

ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿ,
ಶಿವಮೊಗ್ಗ. ದಿನಾಂಕ:06.10.2020
ದೂ:08182-240056, Fax:240093

ಇವರಿಗೆ,
ಅಧ್ಯಕ್ಷರು/ಕಾರ್ಯದರ್ಶಿಗಳು,
ಪೌರ ಸೇವಾ ಸಮಿತಿ (ರಿ), ಶ್ರೀಮತಿ ಗಿರಿಯಮ್ಮ ಕಾಂತಪ್ಪ ಶ್ರೇಷ್ಠಿ ಮಹಿಳಾ ಕಾಲೇಜು ಕಟ್ಟಡ,
4ನೇ ಮುಖ್ಯ ರಸ್ತೆ, ಜೆ.ಸಿ.ಬಡಾವಣೆ,
ಹರಿಹರ – 577 601.

ಮಾನ್ಯರೆ,

ವಿಷಯ: ಶ್ರೀಮತಿ ಗಿರಿಯಮ್ಮ ಕಾಂತಪ್ಪ ಶ್ರೇಷ್ಠಿ ಮಹಿಳಾ ಕಾಲೇಜು, ಹರಿಹರ ಇಲ್ಲಿ ಖಾಲಿ ಇರುವ ಮತ್ತು ಅನುಮತಿಸಲಾದ 05 ಬೋಧಕರ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ.

ಉಲ್ಲೇಖ:
1. ಮಾನ್ಯ ಕಾಲೇಜು ಶಿಕ್ಷಣ ಆಯುಕ್ತರ ಪತ್ರ ಸಂಖ್ಯೆ:ಕಾಶಿಇ:74:ಖಾಹುಭ:ಶಿವಿ:2018-19:ನೇವಿ-2 ದಿನಾಂಕ:30.08.2019
2. ಈ ಕಛೇರಿ ಪತ್ರ ಸಂಖ್ಯೆ:ಪ್ರಾಕಶಿ:ಕಾಶಿಇ:367:ಎಸ್‌ಜಿಆರ್‌ಕೆ:ಖಾಹುಭ:2017-18 ದಿನಾಂಕ:24.09.2019
3. ತಮ್ಮ ಪತ್ರ ಸಂಖ್ಯೆ:ಪಿಎಸ್‌ಎಸ್:24:2020-21, ಸ್ವೀಕೃತಿ ದಿನಾಂಕ:30.09.2020
4. ಜಿಲ್ಲಾಧಿಕಾರಿ ಹಾಗೂ ಸಹಾಯಕ ಚುನಾವಣಾಧಿಕಾರಿ, ಕರ್ನಾಟಕ ಆಗ್ನೇಯ ಪದವೀಧರರ ಕ್ಷೇತ್ರ, ದಾವಣಗೆರೆ ಜಿಲ್ಲೆ ಇವರ ಪತ್ರ ಸಂಖ್ಯೆ:ಚುನಾವಣೆ:ಸಿಆರ್:24:2020 ದಿನಾಂಕ:29.09.2020

** * **

ಸೂಚಿತ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ಹಾಗೂ (2) ರ ಪತ್ರಗಳನ್ವಯ ಪೌರ ಸೇವಾ ಸಮಿತಿ (ರಿ), ಆಡಳಿತ ಮಂಡಳಿ ವ್ಯಾಪ್ತಿಯಲ್ಲಿ ಬರುವ ಶ್ರೀಮತಿ ಗಿರಿಯಮ್ಮ ಕಾಂತಪ್ಪ ಶ್ರೇಷ್ಠಿ ಮಹಿಳಾ ಕಾಲೇಜು, ಹರಿಹರ ಇಲ್ಲಿ ದಿನಾಂಕ:31.12.2015 ರ ಪೂರ್ವದಲ್ಲಿ ತೆರವುಗೊಂಡಂತಹ ಬೋಧಕ ವೃಂದದ ಹುದ್ದೆಗಳ ಭರ್ತಿ ಸಂಬಂಧಿಸಿದಂತೆ, ಒಟ್ಟು – 04 ಬೋಧಕ ಹಾಗೂ 01 ಗ್ರಂಥಪಾಲಕರ ಹುದ್ದೆಗಳನ್ನು ಮೀಸಲಾತಿಯನ್ನು ನಿಗದಿಪಡಿಸುವುದರೊಂದಿಗೆ ಕೆಲ ನಿರ್ದಿಷ್ಟ ಷರತ್ತುಗಳನ್ನು ಪರಿಪಾಲಿಸುವ ಸೂಚನೆ ಅಡಿಯಲ್ಲಿ ಅನುಮತಿ ನೀಡಲಾಗಿತ್ತು.

ಅದಕ್ಕೆ ಅನುಗುಣವಾಗಿ ಆಡಳಿತ ಮಂಡಳಿಯು ನೇಮಕಾತಿ ಪ್ರಕ್ರಿಯೆ ಅಡಿಯಲ್ಲಿ ದಿನಾಂಕ:08.10.2020 ರಿಂದ ದಿನಾಂಕ:10.10.2020 ರವರೆಗೆ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳ ಸಂದರ್ಶನ ನಡೆಸಲು ದಿನಾಂಕ ನಿಗದಿಪಡಿಸಿರುವುದಾಗಿ, ಉಲ್ಲೇಖ (3) ರ ಪತ್ರದಲ್ಲಿ ತಿಳಿಸಿರುತ್ತಾರೆ.

ಉಲ್ಲೇಖ (4) ರ ಪತ್ರದಲ್ಲಿ, ಭಾರತ ಚುನಾವಣಾ ಆಯೋಗದ ದಿನಾಂಕ:29.09.2020ರ ಪತ್ರಿಕಾ ಪ್ರಕಟಣೆಯಲ್ಲಿ ಕರ್ನಾಟಕ ಆಗ್ನೇಯ ಪದವೀಧರರ ಕ್ಷೇತ್ರಕ್ಕೆ ಚುನಾವಣೆಯ ವೇಳಾಪಟ್ಟಿಯನ್ನು ಪ್ರಕಟಿಸಿ, ಮಾದರಿ ನೀತಿ ಸಂಹಿತೆಯು ತತ್‌ಕ್ಷಣದಿಂದಲೇ ಜಾರಿಯಲ್ಲಿರುವುದಾಗಿ ತಿಳಿಸುವ ಮೂಲಕ ಮಾದರಿ ನೀತಿ ಸಂಹಿತೆ ಪಾಲನೆ ಕುರಿತಾದ ಸೂಚನೆಗಳನ್ನು ಚುನಾವಣಾ ಆಯೋಗವು ನೀಡಿರುವಂತೆ, ಮಾದರಿ ನೀತಿ ಸಂಹಿತೆಯನ್ನು ಕಟ್ಟುನಿಟ್ಟಾಗಿ ಪಾಲಿಸಲು ಮತ್ತು ಈ ಕಛೇರಿಯ ಅಧೀನದ ಕಛೇರಿಗಳಿಗೆ ಈ ಕುರಿತಂತೆ ಸೂಕ್ತ ನಿರ್ದೇಶನ ನೀಡುವಂತೆ ನಿರ್ದೇಶಿಸಿರುತ್ತಾರೆ.

ಕಾರಣ, ಉಲ್ಲೇಖ (4) ರ ಮಾನ್ಯ ಜಿಲ್ಲಾಧಿಕಾರಿಗಳು, ಹಾಗೂ ಸಹಾಯಕ ಚುನಾವಣಾಧಿಕಾರಿ, ಕರ್ನಾಟಕ ಆಗ್ನೇಯ ಪದವೀಧರರ ಕ್ಷೇತ್ರ, ದಾವಣಗೆರೆ ಜಿಲ್ಲೆ ರವರ ಪತ್ರವನ್ನು ಈ ಪತ್ರಕ್ಕೆ ಲಗತ್ತಿಸುತ್ತಾ, ಚುನಾವಣಾ ಮಾದರಿ ನೀತಿ ಸಂಹಿತೆ ಉಲ್ಲಂಘನೆಯಾಗದಂತೆ ಮುಂದಿನ ಅವಶ್ಯ ಸೂಕ್ತ ತ್ವರಿತ ಕ್ರಮವನ್ನು ಕೈಗೊಳ್ಳಲು ಈ ಮೂಲಕ ತಮಗೆ ಕಟ್ಟುನಿಟ್ಟಾಗಿ ಸೂಚಿಸಲಾಗಿದೆ.

ತಮ್ಮ ವಿಶ್ವಾಸಿ,

ಅಡಕ:ಉಲ್ಲೇಖ (4) ರ ಪ್ರತಿ.

ಜಂಟಿ ನಿರ್ದೇಶಕರು
ಜಂಟಿ ನಿರ್ದೇಶಕರು
ಕಾಲೇಜು ಶಿಕ್ಷಣ ಪ್ರಾದೇಶಿಕ ಕಛೇರಿ
ಶಿವಮೊಗ್ಗ-577 203.

ಪ್ರತಿಯನ್ನು:-
1. ಪ್ರಾಂಶುಪಾಲರು, ಶ್ರೀಮತಿ ಗಿರಿಯಮ್ಮ ಕಾಂತಪ್ಪ ಶ್ರೇಷ್ಠಿ ಮಹಿಳಾ ಕಾಲೇಜು 4ನೇ ಮುಖ್ಯ ರಸ್ತೆ, ಜೆ.ಸಿ.ಬಡಾವಣೆ, ಹರಿಹರ – 577 601.
2. ಕಛೇರಿ ಪ್ರತಿ.

PRINCIPAL,
...mt. Giriyamma R. Kanthappa Shresti
...irst Grade Women's College
Harihar - 577 601

Scanned with CamScanner

Scanned with CamScanner

ಕರ್ನಾಟಕ ಸರ್ಕಾರ

# ಜಿಲ್ಲಾಧಿಕಾರಿಗಳ ಕಾರ್ಯಾಲಯ, ದಾವಣಗೆರೆ ಜಿಲ್ಲೆ.


ಜಿಲ್ಲಾ ಆಡಳಿತ ಭವನ, ದಾವಣಗೆರೆ

deo.davanagere@gmail.com

dc.deo.davanagere@gmail.com

| | | | |
|---|---|---|---|
| ಕಚೇರಿ | 08192-234640 | 257778 | 272953 |
| ಫ್ಯಾಕ್ಸ್ | 08192-272957 | 257778 | 272953 |


ನಂ. ಚುನಾವಣೆ/ಸಿಆರ್: 24/20-21 ದಿನಾಂಕ : 06.10.2020.

ಗೆ,

ಕಾರ್ಯದರ್ಶಿ,

ಪೌರ ಸೇವಾ ಸಮಿತಿ (ರಿ),

ಹರಿಹರ

ಮಾನ್ಯರೆ,

ವಿಷಯ: ಶ್ರೀಮತಿ ಗಿರಿಯಮ್ಮ ಆರ್ ಕಾಂತಪ್ಪ ಶ್ರೇಷ್ಠಿ ಪ್ರಥಮ ದರ್ಜೆ ಮಹಿಳಾ ಮಹಾವಿದ್ಯಾಲಯ ಹರಿಹರ ಇವರಲ್ಲಿ ಬೋಧಕ ಹುದ್ದೆಗಳ ಕುರಿತು ಆಯ್ಕೆ ಸಂದರ್ಶನ ಮಾಡಲು ಚುನಾವಣಾ ನೀತಿ ಸಂಹಿತೆ ಲಾಘು ಆಗುವ ಅಥವಾ ಆಗದಿರುವ ಬಗ್ಗೆ ನಿರ್ದೇಶನ ನೀಡಲು ಕೋರಿರುವ ಬಗ್ಗೆ.

ಉಲ್ಲೇಖ:

1. ತಮ್ಮ ಪತ್ರ ಸಂಖ್ಯೆ 26/2020-21 ದಿನಾಂಕ:06.10.2020.
2. Manual on Model Code of Conduct March 2019 Document 21 edition 1 para No 5.8

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1)ರ ಪತ್ರದಲ್ಲಿ ಕೋರಲಾದ ಅಂಶಗಳ ಬಗ್ಗೆ ಪರಿಶೀಲಿಸಲಾಗಿ, ಕರ್ನಾಟಕ ಆಗ್ನೇಯ ಪದವೀಧರರ ಕ್ಷೇತ್ರದ ಚುನಾವಣೆಯ ಮಾದರಿ ನೀತಿ ಸಂಹಿತೆಯು ದಿನಾಂಕ 29.09.2020 ರಿಂದ 05.11.2020 ರವರೆಗೆ ಜಾರಿಯಲ್ಲಿರುವುದರಿಂದ ಈ ಅವಧಿಯಲ್ಲಿ ಮಾದರಿ ನೀತಿ ಸಂಹಿತೆ ಕೈಪಿಡಿಯ ಪ್ರಕರಣ 5.8.1 ಮತ್ತು 5.8.2 ರನ್ವಯ ನೇಮಕಾತಿ ಪ್ರಕ್ರಿಯೆ ನಡೆಸಲು ಅವಕಾಶ ಇರುವುದಿಲ್ಲ ಎಂಬ ಅಂಶವನ್ನು ತಮಗೆ ಮಾಹಿತಿಗಾಗಿ ತಿಳಿಸಿದೆ.

ಲಗತ್ತು : Manual on Model Code of Conduct para No 5.8

ತಮ್ಮ ವಿಶ್ವಾಸಿ,

(ಮಹಾಂತೇಶ ಬೀಳಗಿ, ಭಾ.ಆ.ಸೇ.)

ಜಿಲ್ಲಾಧಿಕಾರಿ ಹಾಗೂ

ಸಹಾಯಕ ಚುನಾವಣಾಧಿಕಾರಿ,

ಕರ್ನಾಟಕ ಆಗ್ನೇಯ ಪದವೀಧರರ ಕ್ಷೇತ್ರ.

ದಾವಣಗೆರೆ ಜಿಲ್ಲೆ.

Received on 6/10/20

Please intimate to all candidates immediately

6/10

PRINCIPAL,
Smt. Girjyamma R. Kanthappa Shres
First Grade Women's College
Harihar - 577 601

Scanned with CamScanner

